ಬದುಕು

ಬದುಕು ಎಂದರೆ ಬರಿ ದಿನ ನೂಕುವುದಲ್ಲ
ಬಂದ ಕಷ್ಟಕ್ಕೆ ಹೆದರಿ ಬಾರದ ಸುಖದ ದಾರಿ ಕಾಯುವುದಲ್ಲ
ಪರರ ಅಶ್ರುಸೆಲೆಯಲಿ ಮಿಂದು ಮಿಂಚುವುದಲ್ಲ
ಆಗದ ಕೆಲಸಕ್ಕೆ ಕಾಣದ ಕೈಯ ಶಪಿಸುವುದಲ್ಲ

ಬೇಕು-ಬೇಡಗಳ ಮೇಲೆ ಹಣೆ ಪಟ್ಟಿ ಕಟ್ಟಿ ಜಟ್ಟಿಯಂತೆ ಮೀಸೆ ತಿರುವುವುದಲ್ಲ
ಮನದ ಕದ ತಟ್ಟಿದೊಡನೆಯೆ ಎದೆಯ ಕವಾಟ ತೆರೆದು ನೆಲೆಯೂರಲು-
ಜಾಗ ಕೊಟ್ಟ ತಪ್ಪಿಗೆ ಮರುಗುವುದಲ್ಲ

ಬಂದದ್ದನ್ನು ಬಂದಂತೆ ಇದ್ದದ್ದನ್ನು ಇದ್ದಂತೆ ಸ್ವೀಕರಿಸಿ
ಸುಖ ದುಃಖಗಳೆರಡಕ್ಕೂ ಸರಿಸಮನಾಗಿ ಸಹಕರಿಸಿ
ಕಾಲದ ಮರೆಯಲ್ಲಿ ಲೀನವಾಗುವುದು..

ಕೃರಾನಾ
(ಕೃಷ್ಣಮೂರ್ತಿ ರಾಮಚಂದ್ರ ನಾಯಕ)

© **2006** Copy Rights***: Krishnamurthy Nayak*****, all rights reserved.**

ಪ್ರೀತಿ

ಪ್ರೀತಿ! ಇದಕ್ಕಿಲ್ಲ ಯಾವ ರೀತಿ-ನೀತಿ
ಇನ್ನಾವ ಲೆಕ್ಕ ಈ ಜಾತಿ-ಗೀತಿಯ ಭೀತಿ
ಇದರಾದಿ ತಿಳಿದಿಲ್ಲ ; ಅಂತ್ಯ ಇದಕಿಲ್ಲ
ಇದೊಂದಿದ್ದರೆ ಬೇವಿಲ್ಲ ; ಬಾಳೆಲ್ಲಾ ಬರಿ ಬೆಲ್ಲ

ತೇಲಿಸುವುದು ತಿಳಿ ನೀರ ಆಗಸದಲ್ಲಿ
ಮುಳುಗಿಸಬಲ್ಲದು ಹಾಲ್ಜೇನಿನ ಕಡಲಿನಲ್ಲಿ
ಹುಚ್ಚು ಮನದ ತುಂಬಾ ಹತ್ತಾರು ಆಸೆ
ಕಳೆವ ಪ್ರತಿ ಕ್ಷಣವೂ ತುಂಬಿ ತರುವುದು ಬೆಚ್ಚನೆಯ ಕನಸೆ

ಕಣ್ಣಲ್ಲಿನ ಕಾಮನೆ , ಎದೆಯಲ್ಲಿನ ಭಾವನೆ ಬಾನಗಲ
ಮೈ-ಮನದ ತುಂಬೆಲ್ಲಾ ಭಾರಿ ಅಲ್ಲೋಲಕಲ್ಲೋಲ
ನಡುಗುವ ತುಟಿಗಳ ಆ ಪ್ರಥಮ ಚುಂಬನ
ಇಬ್ಬರೊಳಗೂ ಅರೆಕ್ಷಣ ಹೃದಯಸ್ತಂಭನ

ಈ ಪ್ರೀತಿ ಎಂಬ ಮಾಯೆ ತುಂಬಿದ ಹುಚ್ಚು
ಸಕಲ ಚರಾಚರ ಜೀವಿಗಳಿಗೂ ಅಚ್ಚು-ಮೆಚ್ಚು
ಆ ಸೂರ್ಯ-ಚಂದ್ರ-ತಾರೆ ಇರಲಿ , ಇಲ್ಲದಿರಲಿ
ಪ್ರೀತಿ ನೀನಿಲ್ಲದೇ ನಾ ಹೇಗಿರಲಿ!!!

ಕೃರಾನಾ
(ಕೃಷ್ಣಮೂರ್ತಿ ರಾಮಚಂದ್ರ ನಾಯಕ)

© **2006** Copy Rights***: Krishnamurthy Nayak*****, all rights reserved.**

ಪ್ರಿಯೆ! ಕಾಲವೊಂದು ಮಾಯೆ

ನಿನ್ನ ಬಿಸಿಯುಸಿರು ಸೋಕಲು, ನಿನ್ನ ಹಸಿ ಮೈ ತಾಕಲು
ನನ್ನ ಮೈ–ಮನದ ತುಂಬೆಲ್ಲಾ ಮಿಂಚು–ಗುಡುಗು–ಸಿಡಿಲು
ನನ್ನಿಂದ ಮರೆಯಾದರೆ ಅರೆಕ್ಷಣ ನೀನು
ಊಹಿಸಲಸಾಧ್ಯ ನಾನೇನಾದೇನು?

ನನ್ನ ಬಾಳಪಯಣದ ಹೊತ್ತಿಗೆಗೆ ಪುಟಸಂಖ್ಯೆ ನಿನ್ನ ನೆನಪು
ಅದೊಂದೇ ಸಾಕು ನನ್ನಲ್ಲಿ ತುಂಬಲು ಅದಮ್ಯ ಹುರುಪು
ನಿನ್ನ ಮನದ ತುಡಿತ; ಮೈಯ ಮಿಡಿತ
ತುಂಬಿದೆ ನನ್ನ ಮೈ–ಮನಕೆ ಅಪರಿಮಿತ ಹಿತ

ನನ್ನ ದೇಹದ ಕಣ–ಕಣ
ಹಂಬಲಿಸಿದೆ ನಿನ್ನ ಸಾಂಗತ್ಯ ಈ ಕ್ಷಣ
ಬಂದು ಬಳಸಿಬಿಡು ನನ್ನ ತಕ್ಷಣ
ಹಂಚಿಕೊಳ್ಳೋಣ ನಾವಿಬ್ಬರು ಪ್ರೇಮದ ಹೂರಣ

ನನ್ನ ಮುತ್ತಲ್ಲಿ ಶೃಂಗರಿಸಿಕೊಂಡು
ಈ ತೋಳಲ್ಲಿ ಆಲಂಗಿಸಿಕೊಂಡು
ನನ್ನಲ್ಲಿ ಒಂದಾಗುವುದಾದರೆ ಬಂದು ಬಿಡು ಈ ಕೂಡಲೇ ಪ್ರಿಯೆ!
ಈ ಕಾಲವೆನ್ನುವುದು ತುಂಬು ಸೋಜಿಗದ ಮಾಯೆ!!
ತೋರದು ಎಂದಿಗೂ ನಮ್ಮಲ್ಲಿ ಮತ್ತೊಮ್ಮೆ ದಯೆ!!!

ಕೃರಾನಾ
(ಕೃಷ್ಣಮೂರ್ತಿ ರಾಮಚಂದ್ರ ನಾಯಕ)

© **2006** Copy Rights***: Krishnamurthy Nayak*****, all rights reserved.**

ಸತ್ತ ಪ್ರೀತಿಯ ಅರಸುತ್ತ

ಅರಿತಿರಲಿಲ್ಲ , ಕಲಿತಿರಲಿಲ್ಲ ಈ ಪ್ರೀತಿಯ
ಕಣ್ಮುಚ್ಚಿ ತೆರೆಯುವಷ್ಟರಲ್ಲಿ ಆವರಿಸಿತ್ತದು ನನ್ನೆದೆಯ
ಮುರಿಲಿನಾಚೆಯ ಬೆಳಕ ; ಕಡಲಿನಾಳದ ನಡುಕ
ಮೀರಿಸುತ್ತಿತ್ತು ಆಕೆಯ ಕಾಣುವ ಕ್ಷಣ-ಕ್ಷಣದ ತವಕ

ಯಾರ ಕಣ್ಣು ತಗುಲಿತ್ತೋ ; ಅದರಾಯಸ್ಸು ಮುಗಿದಿತ್ತೋ
ನಾ ಪ್ರೀತಿಸಿದಾಕೆಯ ಮನಸ್ಸು ತಿರುಗಿತ್ತು ಎತ್ತೆತ್ತೋ
ಅಂದು ಬಿಟ್ಟಳಾಕೆ ಬಯಸಿದ್ದು ಸುಳ್ಳೆಂದು ; ಭಾವನೆಯೇ ಇಲ್ಲೆಂದು
ನಗುವಿನ್ನೆಲ್ಲಿ , ಇರಲಿಲ್ಲ ಅಳುವೂ ನಮ್ಮಿಬ್ಬರ ನಡುವೆ ಎಂದೆಂದೂ

ಕಾರ್ಮೋಡ ಕವಿದಿತ್ತು ; ಮನಸು ಕುದಿದಿತ್ತು
ಬಯಸಿದ ಪ್ರೀತಿ ತಂದಿತ್ತು , ಬದುಕುವಾಸೆಗೆ ಕುತ್ತು
ಆದರೆ , ನನ್ನದಲ್ಲ ಎಂದೆಂದೂ ಸೋಲೊಪ್ಪುವ ಜಾಯಮಾನ
ಪಡೆದು ತೀರಲೇಬೇಕೆಂದಿರುವೆ ಕಳೆದುದರೆರಡರಷ್ಟು ಪ್ರೇಮಾನ

ನೆಟ್ಟ ನೋಟವಗಲಿಸದೆ ಹುಡುಕುತಿರುವೆ ಪ್ರತಿ ಹೆಣ್ಣಲ್ಲಿ
ಇರಬಹುದೇನೆಂದು ಪ್ರೀತಿಯ ಹೊಸಬೆಳಕು ಆ ಕಣ್ಣಲ್ಲಿ
ಇತ್ತ ಭಾಷೆಯ ಮರೆಯುತ್ತ ; ಕಳೆದ ದಿನವ ಮರಳಿ ಕರೆಯುತ್ತ
ದಿಕ್ಕು-ದೆಸೆಯಿಲ್ಲದೇ ಹೊರಟಿರುವೆ ಸತ್ತ ಪ್ರೀತಿಯ ಅರಸುತ್ತ . . .

ಕೃರಾನಾ
(ಕೃಷ್ಣಮೂರ್ತಿ ರಾಮಚಂದ್ರ ನಾಯಕ)

© **2006** Copy Rights***: Krishnamurthy Nayak*****, all rights reserved.**

ಗೆಳತಿ ಕೊಡು ಅಣತಿ

ನನ್ನ ಒಲ್ಲದ ಹುಡುಗಿಯ ಪ್ರೀತಿಸಿ ಸೋತು ನಾ ನಿಂತ ನೀರಾದೆ
ನಿಂತ ನೀರ ನಿರಂತರವಾಗಿಸಿ ಈ ಕೃಷ್ಣನ ಪಾಲಿಗೆ ನೀನಾದೆ ರಾಧೆ

ಸೋತ ಭಾರದ ಹೃದಯ ಹೊತ್ತು
ನಿಂತಿದ್ದೆ ನಾನು ಆ ದಿನ ದಿಕ್ಕೆಟ್ಟು
ಪ್ರೀತಿ ತುಂಬಿದ ಸ್ನೇಹವ ನನ್ನಲ್ಲಿ ಬಿತ್ತು
ನೀಡಿದೆ ನನಗೆ, ನನ್ನ ಆಸೆಗೆ ಮರುಹುಟ್ಟು

ಈಗುಳಿದಿರುವುದು ನನ್ನಲ್ಲಿ ಆ ಹುಡುಗಿಯ ಅತ್ಯಲ್ಪ ನೆನಪು
ಕಣ್ಣಲ್ಲಿ ಎದೆಯಲ್ಲಿ ಎಲ್ಲೆಲ್ಲೂ ನಿನ್ನದೊಂದೇ ಛಾಪು

ಸತ್ತ ಮನದ ಅಂಗಳದಲ್ಲಿ ಹೂ ಬನವ ಬೆಳೆಸಿ
ತುಂಬು ಪ್ರೀತಿಯ ಮಳೆಸುರಿದೆ
ಅತ್ತ–ಇತ್ತ ಮನದ ಸುತ್ತ ಆಸೆಯ ಗರಿಗೆದರಿಸಿ
ನಿನ್ನ ಬಿಸಿಯುಸಿರು ಮುತ್ತಿನ ಮತ್ತೇರಿಸುತಿದೆ

ನನ್ನದು ಸೋತು–ಸತ್ತು ಮತ್ತೆ ಚಿಗುರೊಡೆದ ಬದುಕು ಗೆಳತಿ
ಮತ್ತೆ ಸಾಯಲಿಚ್ಛೆಯಿಲ್ಲ ಬದುಕಲು ಬೇಕಿರುವುದು ನಿನ್ನದೊಂದೇ ಅಣತಿ!!!

ಕೃರಾನಾ
(ಕೃಷ್ಣಮೂರ್ತಿ ರಾಮಚಂದ್ರ ನಾಯಕ)

© **2006** Copy Rights***: Krishnamurthy Nayak*****, all rights reserved.**

ಮೌಲ್ಯ

ರೀಚಿದ ಸಾಲುಗಳೆಲ್ಲಾ ಕವನಗಳಾಗುವಂತಿದ್ದರೆ
ಕಪಿಗಳೆಲ್ಲಾ ಕವಿಗಳಾಗುತ್ತಿರಲಿಲ್ಲವೇ?

ಆಡಿದ ಮಾತುಗಳೆಲ್ಲಾ ಅಮೃತನುಡಿಗಳಾಗುತ್ತಿದ್ದರೆ
ಗುರುಗಳೆಂಬ ಗುರುಗಳ ಗರಿ ಮುದುರುತ್ತಿರಲಿಲ್ಲವೇ?

ಅತ್ತು ಸುರಿಸಿದ ಕಣ್ಣೀರು ಬತ್ತಿ ಹೋಗಿರದಿದ್ದರೆ
ಸಪ್ತ ಸಾಗರಗಳ ಪಟ್ಟಿಗೆ ಮತ್ತೊಂದರ ಸೇರ್ಪಡೆಯಾಗುತ್ತಿರಲಿಲ್ಲವೇ?

ಬಯಸಿದ್ದನ್ನೆಲ್ಲ ಬರಿಸಿಕೊಳ್ಳುವಂತಿದ್ದರೆ
ತ್ರಿಪುರಸುಂದರಿಯರ ಅರಸಿತಂದು ಸ್ವರ್ಗವ ಗುಡಿಸಿ ರಂಗೋಲೆಯಿಡುತ್ತಿರಲಿಲ್ಲವೇ?

ಅಂದುಕೊಂಡಿದ್ದೆಲ್ಲ ಆಗಿಹೋಗುವಂತಿದ್ದರೆ
ಆ ದೇವರೆಂಬ ದೇವರ ಹೊರಅಟ್ಟಿ ಗುಡಿಯ ಗಡಿದಾಟಿಸುತ್ತಿರಲಿಲ್ಲವೇ?

ಹಾಗಾಗಿಲ್ಲ ; ಆಗುತ್ತಿಲ್ಲ ; ಆಗುವುದಿಲ್ಲವೆಂದರೆ ಅದಕೊಂದೇ ಅರ್ಥ
ಪ್ರತಿಯೊಂದಕೂ ಅದರದೇ ಮೌಲ್ಯಾಧಾರಿತ ಚೌಕಟ್ಟಿಟ್ಟಿದ್ದಾನೆ ಆ ಸೃಷ್ಟಿಕರ್ತ!!!

ಕೃರಾನಾ
(ಕೃಷ್ಣಮೂರ್ತಿ ರಾಮಚಂದ್ರ ನಾಯಕ)

© **2006** Copy Rights***: Krishnamurthy Nayak*****, all rights reserved.**